ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	665
2	ಸದಸ್ಯರ ಹೆಸರು	:	ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	12-03-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ಎಷ್ಟು ಟನ್ ಕಸ ಉತ್ಪತ್ತಿಯಾಗುತ್ತಿದೆ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸುಮಾರು 4000–4500 ಮೆ.ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ.
ಆ)	ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ಉತ್ಪತ್ತಿಯಾಗುತ್ತಿರುವ ಕಸವನ್ನು ನಿರ್ವಹಿಸಲು ಪಾಲಿಕೆಯ ಆಡಳಿತ ಕೈಗೊಂಡಿರುವ ಕ್ರಮಗಳೇನು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಕೆಳಕಂಡ ಸ್ಥಳಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ. 1. ಕೆ.ಸಿ.ಡಿ.ಸಿ (ಕೂಡ್ಲು), ಕನ್ನಹಳ್ಳಿ, ಸೀಗೇಹಳ್ಳಿ, ಸುಬ್ಬರಾಯನಪಾಳ್ಯ, ಚಿಕ್ಕನಾಗಮಂಗಲ, ಲಿಂಗಧೀರನಹಳ್ಳಿ ಮತ್ತು ದೊಡ್ಡಬಿದರಕಲ್ಲು ಗೊಬ್ಬರ ತಯಾರಿಕಾ ಘಟಕಗಳಲ್ಲಿ ಒಟ್ಟಾರೆ 600 ಮೆ.ಟನ್ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ. 2. ಗಾಂಧಿನಗರ, ಜಯನಗರ, ಬೇಗೂರು, ಕೆ.ಸಿ.ಡಿ.ಸಿ, ಕೂಡ್ಲು, ವರ್ತೂರು, ಲಿಂಗಧೀರನಹಳ್ಳಿ, ನಾಗಪುರ, ದೊಮ್ಮಲೂರು, ಕೋರಮಂಗಲ, ಕೆ.ಆರ್.ಮಾರುಕಟ್ಟೆ, ಮತ್ತಿಕೆರೆ ಮತ್ತು ಕುವೆಂಪುನಗರದಲ್ಲಿ ಪ್ರತಿದಿನ 5 ಟನ್ ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸುವ ಘಟಕ. 3. ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದಲ್ಲಿ ಪ್ರತಿದಿನ 500 ಮೆ.ಟನ್ ಸಂಸ್ಕರಿಸುವ ಸಾಮರ್ಥ್ಯದ ಸಮಗ್ರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಮೆ॥ ಎಂ.ಎಸ್.ಜಿ.ಪಿ ಇನ್‌ಫ್ರಾಟೆಕ್ ಪ್ರೈ.ಲಿ ಸಂಸ್ಥೆಯವರ ಸ್ವಂತ ಜಾಗದಲ್ಲಿ ಸ್ಥಾಪಿಸಲಾಗಿದೆ. 4. ವಾರ್ಡ್ ನಂ. 94, ಗಾಂಧಿನಗರ, ಪಶ್ಚಿಮ ವಲಯದಲ್ಲಿ ಪ್ರತಿದಿನ 25 ಟನ್ ತೆಂಗಿನ ಚಿಪ್ಪು ಮತ್ತು ಮರದ ಕೊಂಬೆಗಳಿಂದ ಜೈವಿಕ ಇಂಧನ (Bio fuel through Pelletisation) ಉತ್ಪಾದಿಸುವ ಘಟಕ. ಮುಂದುವರೆದು, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ತ್ಯಾಜ್ಯದಿಂದ ವಿದ್ಯುತ್/ಗೊಬ್ಬರ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲು ಈ ಕೆಳಕಂಡ ಯೋಜನೆಗಳಿಗೆ ಅನುಮತಿ ನೀಡಲಾಗಿದೆ.

<table>
<tr>
<td></td>
<td></td>
<td>
1. ಸರ್ವೆ ನಂ.85 ಕನ್ನಹಳ್ಳಿಯಲ್ಲಿರುವ ಪಾಲಿಕೆಯ ಗೊಬ್ಬರ ಉತ್ಪಾದಿಸುವ ಘಟಕವನ್ನು ಪ್ರತಿದಿನ 1000 ಮೆ.ಟನ್ ತ್ಯಾಜ್ಯ ಸಂಸ್ಕರಿಸಿ ವಿದ್ಯುತ್ ಉತ್ಪಾಧಿಸುವ ಘಟಕವನ್ನು ಸ್ಥಾಪನೆ (ಮೆ॥ ಸತಾರೆಂ ಎಂಟರ್ ಪ್ರೈಸಸ್).
2. ದೊಡ್ಡಬಿದರಕಲ್ಲು ಗ್ರಾಮದ ಪಾಲಿಕೆಯ ಜಾಗದಲ್ಲಿ ಪ್ರತಿದಿನ 100 ಮೆಟ್ರಿಕ್ ಟನ್ ಘನತ್ಯಾಜ್ಯ ಸಂಸ್ಕರಿಸಿ ಗೊಬ್ಬರ, ಬಯೋಗ್ಯಾಸ್, ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಯೋಜನೆ (M/s Indium).
3. ಮಾವಳ್ಳಿಪುರ ಗ್ರಾಮದ ಪಾಲಿಕೆಯ ಜಾಗದಲ್ಲಿ ಪ್ರತಿದಿನ 500 ಮೆಟ್ರಿಕ್ ಟನ್ ಘನತ್ಯಾಜ್ಯ ಸಂಸ್ಕರಿಸಿ ಗೊಬ್ಬರ, ಬಯೋಗ್ಯಾಸ್, ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಯೋಜನೆ (M/s NEG).
4. ಚಿಕ್ಕನಾಗಮಂಗಲ ಗ್ರಾಮದ ಪಾಲಿಕೆಯ ಜಾಗದಲ್ಲಿ ಪ್ರತಿದಿನ 500 ಮೆಟ್ರಿಕ್ ಟನ್ ಘನತ್ಯಾಜ್ಯ ಸಂಸ್ಕರಿಸಿ ಗೊಬ್ಬರ ಮತ್ತು ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಯೋಜನೆ (M/s 3 Wayste).
</td>
</tr>
<tr>
<td>ಇ)</td>
<td>ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕಸ ನಿರ್ವಹಿಸಲು 2016-17, 2017-18, 2018-19 ಮತ್ತು 2019-20ರ ಸಾಲಿನಲ್ಲಿ ಖರ್ಚು ಮಾಡಲಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು).</td>
<td>
ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಕಸ ನಿರ್ವಹಿಸಲು 2016-17, 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಖರ್ಚು ಮಾಡಲಾದ ಹಣದ ವಿವರ ಈ ಕೆಳಕಂಡಂತಿದೆ:
(ರೂ.ಕೋಟಿಗಳಲ್ಲಿ)
<table>
<tr><th>ವರ್ಷಗಳು</th><th>ಪಾಲಿಕೆಯ ಅನುದಾನ</th><th>ಸರ್ಕಾರದ ಅನುದಾನ</th><th>ಒಟ್ಟು ಮೊತ್ತ</th></tr>
<tr><td>2016-17</td><td>383.00</td><td>189.00</td><td>572.00</td></tr>
<tr><td>2017-18</td><td>402.00</td><td>507.00</td><td>909.00</td></tr>
<tr><td>2018-19</td><td>393.00</td><td>442.00</td><td>835.00</td></tr>
<tr><td>2019-20</td><td>363.00</td><td>116.00</td><td>479.00</td></tr>
</table>
</td>
</tr>
</table>

ಸಂಖ್ಯೆ: ನಅಇ 42 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ